ಹೊಸ ಕೈಗಾರಿಕಾ ನೀತಿ

606 (1053) ಶ್ರೀ ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಹೊಸ ಕೈಗಾರಿಕಾ ನೀತಿ 2009ನ್ನು ಜಾರಿಗೆ ತಂದಿರುವುದೇ? ಬಂದಿದ್ದಲ್ಲಿ, ಅದರ ಪ್ರತಿಯನ್ನು ಒದಗಿಸುವುದು;

ಆ) 2008–09ನೇ ಸಾಲಿನಲ್ಲಿ ಎಷ್ಟು ದೊಡ್ಡ ಮತ್ತು ಅತಿ ದೊಡ್ಡ ಕೈಗಾರಿಕೆಗಳ ಸ್ಥಾಪನೆಗೆ ಬಂದಂತಹ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದೆ ಹಾಗೂ ಎಷ್ಟು ಬಂಡವಾಳ ಹೂಡಿಕೆಯನ್ನು ನಿರೀಕ್ಷಿಸಲಾಗಿತ್ತು?

ಇ) ಗ್ರಾಮೀಣ ಪ್ರದೇಶಗಳಲ್ಲಿ ಬಿ.ಪಿ.ಓ.ಗಳನ್ನು ಸ್ಥಾಪಿಸಲು ಎಷ್ಟು ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಇವುಗಳನ್ನು ಎಲ್ಲೆಲ್ಲಿ ಸ್ಥಾಪಿಸಲಾಗಿದೆ.?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಹೌದು, ಪ್ರತಿ ಲಗತ್ತಿಸಿದೆ. ಇದು ಇಲಾಖಾ ವೆಬ್‌ಸೈಟ್‌ನಲ್ಲಿ ಸಹ ಲಭ್ಯವಿರುತ್ತದೆ.

ಆ) 2008–2009ನೇ ಸಾಲಿನಲ್ಲಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆಯಲ್ಲಿ (ರೂ. 50.00 ಕೋಟಿಗಂತ ಹೆಚ್ಚಿನ ಬಂಡವಾಳ ಹೂಡಿಕೆಯ) 50 ಯೋಜನೆಗಳನ್ನು ಅನುಮೋದಿಸಲಾಗಿದೆ. ಈ ಅನುಮೋದಿತ ಯೋಜನೆಗಳಿಂದ ರೂ. 1,05,266.20 ಕೋಟಿ ಬಂಡವಾಳ ಹೂಡಿಕೆ ನಿರೀಕ್ಷೆ ಇದ್ದು, 4,10,842 ಜನರಿಗೆ ಉದ್ಯೋಗಾವಕಶ ಲಭ್ಯವಾಗಲಿದೆ.

ಇದೇ ಅವಧಿಯಲ್ಲಿ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಯಲ್ಲಿ (ರೂ.3.00 ಕೋಟಿಯಿಂದ ರೂ. 50.00 ಕೋಟಿ ಒಳಗಿನ ಬಂಡವಾಳ ಹೂಡಿಕೆಯ) 310 ಯೋಜನೆಗಳನ್ನು ಅನುಮೋದಿಸಲಾಗಿದೆ. ಈ ಅನುಮೋದಿತ ಯೋಜನೆಗಳಿಂದ ರೂ. 5,181.62 ಕೋಟಿ ಬಂಡವಾಳ ಹೂಡಿಕೆ ನಿರೀಕ್ಷೆ ಇದ್ದು 1,35,623 ಜನರಿಗೆ ಉದ್ಯೋಗಾವಕಾಶ ಲಭ್ಯವಾಗಲಿದೆ.

ಇ) ಗ್ರಾಮೀಣ ಪ್ರದೇಶಗಳಲ್ಲಿ ಬಿ.ಪಿ.ಓ ಗಳನ್ನು ಸ್ಥಾಪಿಸಲು ರೂ. 90-00 ಲಕ್ಷಗಳ ಸಹಾಯಧನವನ್ನು ಶ್ರೀರಂಗಪ್ಪಣ (ಮಂಡ್ಯ ಜಿಲ್ಲೆ) ಸಾಲಿಗ್ರಾಮ (ಹಾಸನ ಜಿಲ್ಲೆ) ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ), ಶಿಗ್ಗಾಂವ (ಹಾವೇರಿ ಜಿಲ್ಲೆ) ಘಟಕಗಳಿಗೆ ಬಿಡುಗಡೆ ಮಾಡಲಾಗಿದೆ (ದಿನಾಂಕ: 10.03.2010 ರ ವರೆಗೆ).

ಇದಲ್ಲದೆ ಈ ಕೆಳಕಂಡ ಪ್ರದೇಶಗಳಲ್ಲಿ 15 ಬಿಪಿಓ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

1. ನಂಜನಗೂಡು (ಮೈಸೂರು ಜಿಲ್ಲೆ)
2. ದೇವದುರ್ಗ (ರಾಯಚೂರು ಜಿಲ್ಲೆ)
3. ಪಾವಗಡ (ತುಮಕೂರು ಜಿಲ್ಲೆ)
4. ಮುಂಡರಗಿ (ಗದಗ ಜಿಲ್ಲೆ)
5. ಚಿಕ್ಕಬಳ್ಳಾಪುರ (ಚಿಕ್ಕಬಳ್ಳಾಪುರ ಜಿಲ್ಲೆ)
6. ಶಿರಸಿ (ಉತ್ತರ ಕನ್ನಡ ಜಿಲ್ಲೆ)
7. ಹೊಸದುರ್ಗ (ಚಿತ್ರದುರ್ಗ ಜಿಲ್ಲೆ)
8. ಹುಳಿಯಾರ್ (ತುಮಕೂರು ಜಿಲ್ಲೆ)
9. ಜಗಳೂರು (ದಾವಣಗೆರೆ ಜಿಲ್ಲೆ)
10. ಮುದ್ದೇನಹಳ್ಳಿ (ಚಿಕ್ಕಬಳ್ಳಾಪುರ ಜಿಲ್ಲೆ)
11. ಲಕ್ಷ್ಮೇಶ್ವರ (ಗದಗ ಜಿಲ್ಲೆ)
12. ಹುಣಸೂರು (ಮೈಸೂರು ಜಿಲ್ಲೆ)
13. ತೀರ್ಥಹಳ್ಳಿ (ಶಿವಮೊಗ್ಗ ಜಿಲ್ಲೆ)
14. ಇಲಕಲ್ (ಬಾಗಲಕೋಟೆ ಜಿಲ್ಲೆ)
15. ಶಂಕರಘಟ್ಟ (ಚಿಕ್ಕಮಗಳೂರು ಜಿಲ್ಲೆ)

ಎ.ಪಿ.ಎಂ.ಸಿ. ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಟ್ಟಡಗಳು

608 (822) ಡಾ: ಸುಧಾಕರ್ ಎಂ.ಸಿ. (ಚಿಂತಾಮಣಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕು, ಕಸಬಾ ಹೋಬಳಿ ನೆಕ್ಕುಂದಿ ಗ್ರಾಮದ ಸರ್ವೆ ನಂ.196 ರಲ್ಲಿ 1.31 ಎಕರೆ ಸರ್ಕಾರಿ ಭೂಮಿ ಇದ್ದು, 1 ಎಕರೆ ಎ.ಪಿ.ಎಂ.ಸಿ ಮಾರ್ಕೆಟ್ ಸಂತೆ ಮೈದಾನಕ್ಕಾಗಿ ಹಾಗೂ 0.31 ಗುಂಟೆ